1280 – 1355

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್. ಎಸ್. ಗೋಪಿನಾಥ್ ರವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ

**ಸೂಚನೆ:-**

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳ ಮಾಲೀಕರಿಗೆ ನೋಟಿಸ್ ನೀಡಿದ ಬೆನ್ನಲ್ಲೇ ಹತ್ತು ಸಾವಿರಕ್ಕೂ ಅಧಿಕ ಆಕ್ಷೇಪಣೆ ಅರ್ಜಿಗಳು ಸಲ್ಲಿಕೆಯಾಗಿವೆ. ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೈಲಕೋನೇನಹಳ್ಳಿ, ಲಕ್ಷ್ಮೀಪುರ, ಮಾದವಾರ, ಬಿಡ್ಡರಹಳ್ಳಿ, ಕದೀರನಹಳ್ಳಿ, ಹಾರೋಕ್ಯಾತನಹಳ್ಳಿ, ಸಿದ್ದನಹೊಸಹಳ್ಳಿ, ಮಾದನಾಯಕನಹಳ್ಳಿ ಮತ್ತು ಆನೇಕಲ್ ತಾಲ್ಲೂಕಿನ ಜಿಗಣಿ -ಹೋಬಳಿಯ ಗೊಲ್ಲಹಳ್ಳಿ, ಹುಲ್ಲಹಳ್ಳಿ, ಕನ್ನನಾಯಕನ ಅಗ್ರಹಾರ, ಲಕ್ಷ್ಮೀಪುರ, ಸಕಲವಾರ, ವಡೇರಹಳ್ಳಿ ಜಮೀನುಗಳ ಮಾಲೀಕರಿಗೆ ಬಿಬಿಸಿ ಯೊಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನಾಧಿಕಾರಿಗಳು ನೋಟೀಸ್ ನೀಡಿರುತ್ತಾರೆ. ಇದರ ಬೆನ್ನಲ್ಲೆ ಜಮೀನು ಮಾಲೀಕರು ಆಕ್ಷೇಪಣೆ ಅರ್ಜಿ ಸಲ್ಲಿಸುತ್ತಿದ್ದಾರೆ. ಸದರಿ ಗ್ರಾಮಗಳಲ್ಲಿ ಈಗಾಗಲೇ ಸರಿ ಸುಮಾರು 50 ಸಾವಿರಕ್ಕೂ ಹೆಚ್ಚು ಮನೆ ಮತ್ತು ವಾಣಿಜ್ಯ ಕಟ್ಟಡಗಳು ನಿರ್ಮಿಸಿದ್ದು ನಗರೀಕರಣಗೊಂಡಿದೆ.**

**2005 ರಲ್ಲಿ ಅಧಿಸೂಚನೆ ಹೊರಡಿಸಿ, ಈಗ ಬಿಡಿಎ ಜಮೀನು ಸ್ವಾಧೀನಪಡಿಸಿಕೊಳ್ಳುತ್ತಿರುವುದು "ಅವೈಜ್ಞಾನಿಕ", ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಮಾರುಕಟ್ಟೆದರಕ್ಕಿಂತ ಹೆಚ್ಚಿನ ಪರಿಹಾರ ನೀಡಬೇಕು, ಈಗಾಗಲೇ ಮನೆಗಳನ್ನು ನಿರ್ಮಿಸಲಾಗಿದ್ದು ಜಮೀನು ಕಳೆದುಕೊಂಡು ಎಲ್ಲಿಗೆ ಹೋಗಬೇಕು? ಎಂದು ಜಮೀನು ಮಾಲೀಕರು ವಿರೋದ ವ್ಯಕ್ತಪಡಿಸುತ್ತಿದ್ದಾರೆ. ಸರ್ಕಾರ ನೀಡುವ ಪರಿಹಾರ ಬೇಡ, ನಮ್ಮ ಜಮೀನನ್ನು ಕಿತ್ತುಕೊಳ್ಳಬೇಡಿ ಎಂಬ ವಿರೋಧವನ್ನು ಜಮೀನುಗಳ ಮಾಲೀಕರು ಆಕ್ಷೇಪಣೆ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.**

**ಈ ಹಿನ್ನಲೆಯಲ್ಲಿ 50 ಸಾವಿರ ಮನೆಗಳನ್ನು ಧ್ವಂಸಗೊಳಿಸಿ ರಸ್ತೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಬಾರದೆಂದು ಒತ್ತಾಯಿಸಿರುವ ಬಗ್ಗೆ.**

**ಉತ್ತರ:-**

- ಬೆಂಗಳೂರು ಪೆರಿಫೆರಲ್ ರಿಂಗ್ ರಸ್ತೆ ಭಾಗ-2 ರ ಯೋಜನೆಯಲ್ಲಿ ಹೊಸೂರು ರಸ್ತೆ - ಕನಕಪುರ ರಸ್ತೆ - ಮೈಸೂರು ರಸ್ತೆ - ಮಾಗಡಿ ರಸ್ತೆ - ತುಮಕೂರು ರಸ್ತೆ ಮಾರ್ಗಗಳನ್ನೊಳಗೊಂಡಂತೆ 51.57 ಕಿ.ಮೀ ಉದ್ದದ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ.

- ಸದರಿ ರಸ್ತೆಯು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ, ಬೈಲಕೋನೇನಹಳ್ಳಿ, ಲಕ್ಷ್ಮೀಪುರ, ಮಾದವಾರ, ಮಾಚೋಹಳ್ಳಿ ಇನ್ನಿತರೇ ಗ್ರಾಮಗಳಲ್ಲಿ ಹಾದುಹೋಗುತ್ತಿದ್ದು, ಈ ಪ್ರದೇಶಗಳ ಭೂಸ್ವಾಧೀನಕ್ಕಾಗಿ ದಿನಾಂಕ:12.12.2005 ಮತ್ತು ದಿನಾಂಕ:15.11.2006ರಂದು ಕ್ರಮವಾಗಿ 1862 ಎಕರೆ 10 ಗುಂಟೆ ಮತ್ತು 854 ಎಕರೆಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.

- ಪ್ರಸ್ತಾಪಿತ ರಸ್ತೆಯು ಸರ್ಕಾರದಿಂದ ಅನುಮೋದನೆಗೊಂಡಿರುವ RMP-2015 ರಲ್ಲಿಯೂ ಸಹ ಗುರುತಿಸಲ್ಪಟ್ಟಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು W.P No.21385/2021(LB-BMP) ರಲ್ಲಿ ದಿನಾಂಕ:18.11.2023ರಂದು ನೀಡಿರುವ ಆದೇಶದಲ್ಲಿ ಬೆಂಗಳೂರು ಪೆರಿಫೆರಲ್ ರಿಂಗ್ ರಸ್ತೆ ಭಾಗ-2 ರ ಕುರಿತು ಈ ಕೆಳಕಂಡಂತೆ ಆದೇಶಿಸಿರುತ್ತದೆ.

  ..."A direction is issued to the respondent - State Government and Bengaluru Development Authority to ensure that the acquisition proceedings are concluded as expeditiously as possible and at any rate within a period of six months from the date of receipt of a copy of this order."

- ಮಾನ್ಯ ಉಚ್ಚ ನ್ಯಾಯಾಲಯದ ಮೇಲ್ಕಂಡ ಆದೇಶದಂತೆ ಪಿ.ಆರ್.ಆರ್-2ರ ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮೂಲಕ ಮೈಸೂರು ರಸ್ತೆಯವರೆಗೆ ರಸ್ತೆಗೆ

ಬೇಕಾಗುವ ಅಗತ್ಯ ಭೂ ಪ್ರದೇಶಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲು ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:30/2024ರಲ್ಲಿ ದಿನಾಂಕ:25.01.2024 ರಂದು ತೀರ್ಮಾನಿಸಲಾಗಿರುತ್ತದೆ.

- ನಾಡಪ್ರಭು ಕೆಂಪೇಗೌಡ ಬಡಾವಣೆಯ ಮಧ್ಯೆ ಹಾದುಹೋಗುವ ಪೆರಿಫೆರಲ್ ವರ್ತುಲ ರಸ್ತೆ-2 ರ ಭಾಗವಾದ ಮೈಸೂರು ರಸ್ತೆ-ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಕಾಮಗಾರಿಗಾಗಿ ಪ್ರಾಧಿಕಾರದ ವಿಷಯ ಸಂಖ್ಯೆ 338/2011 ದಿನಾಂಕ 24.10.2011 ರ ನಿರ್ಣಯದಂತೆ ಅವಶ್ಯವಾದ 321 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ 27.07.2011 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಭಾಗದ ರಸ್ತೆ ಕಾಮಗಾರಿಯು ಬಹುತೇಕ ಮುಕ್ತಾಯ ಹಂತದಲ್ಲಿರುತ್ತದೆ.

- ಫೆರಿಫೆರಲ್ ರಿಂಗ್ ರಸ್ತೆ (ಪಿ.ಆರ್.ಆರ್-2) ಮೈಸೂರು ರಸ್ತೆಯಿಂದ ಹೊಸೂರು ರಸ್ತೆ ವರೆಗೆ ಈಗಾಗಲೇ ಡಿ.ಪಿ.ಆರ್ ಸಿದ್ದಪಡಿಸಲು ಯೋಜನಾ ಸಮಾಲೋಚಕರನ್ನು ಟೆಂಡರ್ ಮೂಲಕ ನಿಯೋಜಿಸಿ, ಪ್ರಸ್ತುತ ಡಿ.ಪಿ.ಆರ್ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ. ಡ್ರೋಣ್ ಮುಖಾಂತರ ಸರ್ವೆ ಕಾರ್ಯ ಕೈಗೊಳ್ಳಲಾಗಿರುತ್ತದೆ.

- ಯೋಜನಾ ಪಥದಲ್ಲಿ ನಿರ್ಮಾಣಗೊಂಡಿರುವ ಜನವಸತಿ ಪ್ರದೇಶಗಳ ವಿವರಗಳನ್ನೂ ಸಹ ಸಂಗ್ರಹಿಸಲಾಗುತ್ತಿದ್ದು ಡಿ.ಪಿ.ಆರ್. ಪ್ರಕ್ರಿಯೆ ಅಂತಿಮಗೊಂಡ ನಂತರ ಪ್ರಸ್ತಾಪಿತ ಪಥದಲ್ಲಿ ವಾಸದ ಮನೆಗಳಿದ್ದಲ್ಲಿ ಎಲ್ಲಾ ತಾಂತ್ರಿಕ ಅಂಶಗಳನ್ನು ಪರಿಗಣಿಸಿ ನಿಗಧಿಪಡಿಸಬಹುದಾದ ರಸ್ತೆ ಮಾರ್ಗದ ಪಥಗಳ ಅನುಸಾರ ಮುಂದಿನ ಅಗತ್ಯ ಕ್ರಮಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ-1976 ರನ್ವಯ ಕೈಗೊಳ್ಳಲಾಗುತ್ತದೆ.

**ಸಂಖ್ಯೆ**:ನಅಇ 126 ಬೆಂಭೂಸ್ವಾ 2025

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ